Akashvani : Bangalore

Regional Bulletin In Kannada

13.04.2026 18.40 hrs

ಆಕಾಶವಾಣಿ ಬೆಂಗಳೂರು

ಪ್ರದೇಶ ಸಮಾಚಾರ

***************

ಮುಖ್ಯಾಂಶಗಳು

- ಗ್ಯಾರಂಟಿ ಯೋಜನೆಗಳಿಗಾಗಿ ರಾಜ್ಯ ಸರ್ಕಾರದಿಂದ ಸುಮಾರು ೧ ಲಕ್ಷದ ೩೧ ಸಾವಿರ ಕೋಟಿ ರೂಪಾಯಿ ವೆಚ್ಚ - ಮುಖ್ಯಮಂತ್ರಿ ಸಿದ್ದರಾಮಯ್ಯ
- ಮಹಿಳಾ ಮೀಸಲಾತಿ; ಕೇಂದ್ರದ ಉಪಕ್ರಮಕ್ಕೆ ಗಣ್ಯರ ಸಂತಸ
- ಮಂಡ್ಯ ಜಿಲ್ಲೆಯಲ್ಲಿ ಉದ್ದೇಶಿತ ಎಆರ್ಎಐ ಕೇಂದ್ರದ ಜೊತೆಗೆ ಪೂರಕ ಕೈಗಾರಿಕಾ ಅಭಿವೃದ್ಧಿ ಪಾರ್ಕ್ ಸ್ಥಾಪನೆಗೆ ಚಿಂತನೆ
- ರಾಜ್ಯಾದ್ಯಂತ ನಾಳೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ೧೩೫ನೇ ಜಯಂತ್ಯುತ್ಸವ
- ಧಾರವಾಡದಲ್ಲಿ ನೂತನ ಸ್ವಯಂಚಾಲಿತ ಹವಾಮಾನ ಕೇಂದ್ರ ಆರಂಭ
- ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ ಹ್ಯಾಕಥಾನ್ ನೊಂದಾವಣೆಗೆ ಇಂದು ಕೊನೆಯ ದಿನ; ಬೆಂಗಳೂರಿನಲ್ಲಿ ಮುಂದಿನ ತಿಂಗಳು ಸಮಾರೋಪ ಸಮಾವೇಶ

***************

ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ೧ ಲಕ್ಷದ ೩೧ ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಅವರು, ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರದಲ್ಲಿ ಇಂದು ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ, ಸರ್ಕಾರ ಗ್ಯಾರಂಟಿ ಯೋಜನೆಗಳ ಜೊತೆಗೆ ರಾಜ್ಯದ ಅಭಿವೃದ್ಧಿಯನ್ನು ಮಾಡುತ್ತಿದೆ. ಗ್ಯಾರಂಟಿ ಯೋಜನೆಗಳಿಂದಾಗಿ ಜನರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಾಗಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಮುಖ್ಯಮಂತ್ರಿಯವರು ಎನ್.ಆರ್ ಪುರ- ಹಂದೂರು ಗ್ರಾಮ ಸೇರಿದಂತೆ ಹಲವು ಹಳ್ಳಿಗಳನ್ನು ಸಂಪರ್ಕಿಸುವ ಭದ್ರಾ ಹಿನ್ನೀರಿನ ಸೇತುವೆಯನ್ನು ಲೋಕಾರ್ಪಣೆ ಮಾಡಿದರು. ಈ ಸೇತುವೆಗೆ ರಾಜ್ಯ ಸರ್ಕಾರ ೩೮ ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡಿದ್ದು ಪ್ರಸ್ತುತ ಕಾಮಗಾರಿಗೆ ೩೫ ಕೋಟಿ ರೂಪಾಯಿ ವೆಚ್ಚವಾಗಿದೆ.

***************

ದೇಶದ ಅಭಿವೃದ್ಧಿ ಪಥದ ನಿರೂಪಣೆಯಲ್ಲಿ ಮಹಿಳೆಯರ ಹೆಚ್ಚಿನ ಪಾಲುದಾರಿಕೆಯತ್ತ ಬದ್ಧತೆಯನ್ನು ವ್ಯಕ್ತಪಡಿಸುವ ನಿಟ್ಟಿನಲ್ಲಿ ಇಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ 'ನಾರಿ ಶಕ್ತಿ ವಂದನ್' ರಾಷ್ಟ್ರೀಯ ಸಮಾವೇಶ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ ಅವರು, ಪ್ರಜಾತಂತ್ರದಲ್ಲಿ ಮಹಿಳೆಯರಿಗೆ ಮೀಸಲಾತಿ ಒದಗಿಸುವ ಅವಶ್ಯಕತೆ ಇದೆ ಎಂದು ಹೇಳಿದರು.

ಮಹಿಳಾ ಸಶಕ್ತೀಕರಣ ಕುರಿತಂತೆ ಇದೇ ೧೮ ರಿಂದ ಸಂಸತ್ತಿನ ಬಜೆಟ್ ಅಧಿವೇಶನದ ವಿಶೇಷ ಉಪವೇಶನವನ್ನು ಕರೆಯಲಾಗಿದೆ ಎಂದರು.

ಮಹಿಳಾ ಮೀಸಲಾತಿ ಹಾಗೂ ಸಶಕ್ತೀಕರಣ ಕುರಿತಂತೆ ಕೇಂದ್ರದ ಉಪಕ್ರಮದ ಬಗ್ಗೆ ಸಮಾಜದ ವಿವಿಧ ಕ್ಷೇತ್ರಗಳ ಮಹಿಳೆಯರು ಸಂತಸ ವ್ಯಕ್ತಪಡಿಸಿದ್ದಾರೆ.

***************

ದೇಶದಲ್ಲಿ ಮಹಿಳಾ ಮೀಸಲಾತಿಗಾಗಿ ಸಮಯ ಕೂಡಿಬಂದಿರುವುದು ಸಂತಸದ ವಿಷಯ ಎಂದು ಸುಮಂಗಲಿ ಸೇವಾ ಆಶ್ರಮದ ಸ್ಥಾಪಕಿ ಮತ್ತು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಡಾ.ಎಸ್.ಜಿ. ಸುಶೀಲಮ್ಮ ಹೇಳಿದ್ದಾರೆ.

ಅವರು ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿ, ಭೇಟಿ ಪಡಾವೋ ಭೇಟಿ ಬಚಾವೋ, ಮುಂತಾದ ಅಭಿಯಾನಗಳ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಮಹಿಳೆಯರಿಗೆ ಶಕ್ತಿ ನೀಡಿದ್ದಾರೆ. ಶಾಸನ ಸಭೆಗಳಲ್ಲಿ ಹೆಚ್ಚು ಮೀಸಲಾತಿ ದೊರೆತರೆ ಪ್ರಧಾನಿಯವರ ವಿಕಸಿತ ಭಾರತ ಸಾಕಾರವಾಗುತ್ತದೆ ಅವರ ಪ್ರಯತ್ನಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

***************

ಮಹಿಳಾ ಸಬಲೀಕರಣಕ್ಕಾಗಿ ಕೇಂದ್ರ ಸರ್ಕಾರ ಕೈಗೊಳ್ಳುತ್ತಿರುವ ಕ್ರಮದಿಂದ ಮಹಿಳೆಯರಿಗೆ ಬಲವಾದ ರಾಜಕೀಯ ಬೆಂಬಲ ದೊರೆಯಲಿದೆ ಎಂದು ಮಾಜಿ ಸಚಿವೆ ಶಾಸಕಿ, ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದ ಸುಧಾರಣೆಯಲ್ಲಿ ಮಹಿಳೆಯರು ನಿರ್ಣಾಯಕರಾಗಿ ನಿಲ್ಲುತ್ತಾರೆ ಎಂದರು.

***************

ಕೇಂದ್ರ ಸರ್ಕಾರ, ಮಂಡ್ಯ ಜಿಲ್ಲೆಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಆಟೊಮೋಟೋವ್ ರೀಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ-ಎ.ಆರ್.ಎ.ಐ, ಕೇಂದ್ರದ ಜೊತೆಗೆ ಪೂರಕ ಕೈಗಾರಿಕಾ ಅಭಿವೃದ್ಧಿ ಪಾರ್ಕ್ ಸ್ಥಾಪಿಸುವ ಬಗ್ಗೆ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ರಾಜ್ಯ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ವಿಧಾನಸೌಧದಲ್ಲಿಂದು ಸಮಾಲೋಚನೆ ನಡೆಸಿದರು.

ಈ ನಿಟ್ಟಿನಲ್ಲಿ ಎಆರ್‌ಎಐ ಕೇಂದ್ರಕ್ಕೆ ನಿಗದಿಪಡಿಸಿರುವ ೧೦೦ ಎಕರೆಗಿಂತ ಬದಲಾಗಿ, ಪೂರಕ ಕೈಗಾರಿಕಾಭಿವೃದ್ಧಿ ಪಾರ್ಕ್ ಸ್ಥಾಪನೆ ಅನುಕೂಲವಾಗುವಂತೆ ಕನಿಷ್ಠ ೫೦೦ ಎಕರೆಯಷ್ಟು ಸೂಕ್ತ ಸ್ಥಳ ಹುಡುಕಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

***************

ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿಆರ್‌ಅಂಬೇಡ್ಕರ್ ಅವರ ೧೩೫ನೇ ಜಯಂತಿಯ ಅಂಗವಾಗಿ ರಾಜ್ಯದಾದ್ಯಂತ ನಾಳೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ರಾಜ್ಯ ಸರ್ಕಾರದಿಂದ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಹಾಗೂ ಸಮಾಜ ಸೇವೆಗಾಗಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಹೆಸರಿನಲ್ಲಿ ಸಾಧಕರಿಗಾಗಿ ಪ್ರಕಟಿಸಲಾದ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಮಂಗಳೂರು ವಿಜಯ, ಸಿ.ಎಂ.ಮುನಿಯಪ್ಪ, ಎಚ್.ಎನ್.ಅಣ್ಣಯ್ಯ, ಡಾ.ಹನುಮಂತರಾವ್ ಬಿ ದೊಡ್ಮನಿ ಮತ್ತು ಶೋಭಾ ಗಸ್ತಿ, ಈ ಪ್ರಶಸ್ತಿಗೆ ಭಾಜನರಾಗಿದಾರೆ.

ಪ್ರಶಸ್ತಿ ಐದು ಲಕ್ಷ ನಗದು ಮತ್ತು ೨೦ ಗ್ರಾಂ ಚಿನ್ನದ ಪದಕ ಒಳಗೊಂಡಿದೆ.

ನಾಳೆ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ನಡೆಯುವ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು.

***************

ರಾಜ್ಯ ಬಿಜೆಪಿ ವತಿಯಿಂದ ಇದೇ ೨೦ ರವರೆಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಸಂಸದ ಗೋವಿಂದ ಕಾರಜೋಳ ಬೆಂಗಳೂರಿನಲ್ಲಿಂದು ತಿಳಿಸಿದ್ದಾರೆ.

ಇಂದು ಅವರು ಮಾಧ್ಯಮಗಳ ಜೊತೆ ಮಾತನಾಡಿ, ಬಾಬಾ ಸಾಹೇಬ್ ಅವರ ಜಯಂತಿ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ಇಡೀ ರಾಜ್ಯಕ್ಕೆ ಎಲ್ಲ ಜಿಲ್ಲೆ ಮತ್ತು ತಾಲೂಕುಗಳಿಗೇ ಭಾರತೀಯ ಜನತಾ ಪಕ್ಷ ವತಿಯಿಂದ ಸೂಚನೆ ನೀಡಲಾಗಿದೆ ಎಂದರು.

ಬಿಜೆಪಿ ವತಿಯಿಂದ ರಾಜ್ಯದ ಎಲ್ಲಾ ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಭೀಮ ದೀಪೋತ್ಸವ ನಡೆಯಲಿದೆ. ನಾಳೆ ೫೮ ಸಾವಿರ ಬೂತ್ ಮಟ್ಟದ ಸಮಿತಿಯ ಸದಸ್ಯರು ಸೇರಿ ಬಾಬಾ ಸಾಹೇಬರ ಚಿತ್ರಕ್ಕೆ ಮಾಲಾರ್ಪಣೆ ಮಾಡಲಿದ್ದಾರೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಜನ್ಮ ಜಯಂತೋತ್ಸವ ರಾಷ್ಟ್ರೀಯ ಸಮಿತಿ ಸದಸ್ಯ ಹಾಗೂ ಮಾಜಿ ರಾಜ್ಯ ಕಾರ್ಯದರ್ಶಿ ಜಗದೀಶ್ ಹಿರೇಮನಿ ತಿಳಿಸಿದ್ದಾರೆ.

ವಿಚಾರ ಗೋಷ್ಠಿ, ವಿಚಾರ ಸಂಕಿರಣ, ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹಾಗೂ ಕಿರುಚಿತ್ರ ಪ್ರಚಾರ, ಕರಪತ್ರ ವಿತರಣೆ ಸೇರಿ ವಿವಿಧ ಅಭಿಯಾನ ಮಾಡಲಾಗುವುದು ಎಂದು ಅವರು ಮಾಹಿತಿ ನೀಡಿದ್ದಾರೆ.

***************

ಧಾರವಾಡದ ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿರುವ ಕೃಷಿಹವಾಮಾನ ವೀಕ್ಷಣಾಲಯದಲ್ಲಿ ನೂತನವಾಗಿ ಸ್ವಯಂಚಾಲಿತ ಹವಾಮಾನ ಕೇಂದ್ರ ಆರಂಭಿಸಲಾಗಿದೆ. ಇದರಿಂದ ಹವಾಮಾನ ಕುರಿತ ನಿಖರ ಮಾಹಿತಿ ಲಭ್ಯವಾಗಲಿದೆ ಎಂದು ಉತ್ತರ ಕರ್ನಾಟಕ ಕೃಷಿ ಹವಾಮಾನ ಮುನ್ಸೂಚನೆ ಹಾಗೂ ಸಂಶೋಧನಾ ಕೇಂದ್ರದ ಉಸ್ತುವಾರಿ ಅಧಿಕಾರಿ, ಡಾ. ರಾಜು ರೋಖಡೆ ತಿಳಿಸಿದ್ದಾರೆ.

ಆಕಾಶವಾಣಿಯೊಂದಿಗೆ ಮಾತನಾಡಿದ ಅವರು, ಭಾರತೀಯ ಹಮಾಮಾನ ಇಲಾಖೆ ದೇಶದಾದ್ಯಂತ ಆರಂಭಿಸಿದ ೭೦೦ ಕೇಂದ್ರಗಳಲ್ಲೊಂದಾಗಿದೆ. ಸುಮಾರು ೧೫ ಲಕ್ಷ ರೂ. ವೆಚ್ಚದಲ್ಲಿ ನೂತನ ತಂತ್ರಜ್ಞಾನದ ಸ್ವಯಂಚಾಲಿತ ಹವಾಮಾನ ಕೇಂದ್ರ ನಿರ್ಮಿಸಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಸ್ತುತ ವೀಕ್ಷಣಾಲಯದಲ್ಲಿ ಮಳೆ ಮಾಪಕ, ಗಾಳಿಯ ವೇಗ ಮಾಪಕ, ಗಾಳಿಯ ದಿಕ್ಸೂಚಿ, ಕನಿಷ್ಠ ಹಾಗೂ ಗರಿಷ್ಠ ಉಷ್ಣತೆ ತಿಳಿಯುವ ಸ್ಟಿವನ್‌ಸನ್ ಪರದೆ, ಬಿಸಿಲು ಅವಧಿ ಮಾಪಕ, ನೀರಿನ ಆವಿ ಮಾಪಕ ಸೇರಿದಂತೆ ಪ್ರತ್ಯೇಕ ಸಾಧನಗಳಿವೆ. ವೀಕ್ಷಕರು ಪ್ರತಿಯೊಂದು ಸಾಧನದಿಂದ ಮಾಹಿತಿ ಪಡೆಯುತ್ತಾರೆ. ಆದರೆ ಸೆನ್ಸರ್ ಆಧರಿತ ಸ್ವಯಂಚಾಲಿತ ಹವಾಮಾನ ಕೇಂದ್ರದಿಂದ ಪ್ರತಿ ಗಂಟೆಗೊಮ್ಮೆ ಎಲ್ಲ ಮಾಹಿತಿ ಅಪ್‌ಲೋಡ್ ಆಗುತ್ತದೆ. ಉಷ್ಣತೆ, ಮಳೆ ಪ್ರಮಾಣ, ಗಾಳಿಯ ವೇಗ, ವಾಯುಭಾರ, ಮಣ್ಣಿನ ತೇವಾಂಶ ಕುರಿತ ಮಾಹಿತಿಗಳನ್ನಾಧರಿಸಿ ಬೆಳೆ ಬೆಳೆಯಲು ಪೂರಕವಾಗುತ್ತದೆ. ನೀರಿನ ಬಳಕೆ, ಗೊಬ್ಬರ ಬಳಕೆ ಕುರಿತು ವೈಜ್ಞಾನಿಕ ಅಲ್ಲದೇ ವಾಯುಯಾನಕ್ಕೂ ಅಗತ್ಯ ಮಾಹಿತಿ ಲಭ್ಯವಾಗಲಿದೆ. ಪ್ರಕೃತಿ ವಿಕೋಪ ಸಂಭವಿಸುವ ಮುನ್ನ ಪೂರ್ವ ಸಿದ್ದತೆಗೆ ಪೂರಕವಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಬೈಟ್: ಅಧಿಕಾರಿ, ಡಾ. ರಾಜು ರೋಖಡೆ ( ೪೦ ಸೆಕೆಂಡ್ಸ್)

***************

ಹ್ಯಾಕ್‌ಥಾನ್ ಆಯುಷ್ಮಾನ್ ಭಾರತ ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆಯಡಿ ಆಯೋಜಿಸಲಾಗಿರುವ ಹ್ಯಾಕಥಾನ್-೨೦೧೯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ೨ ಸಾವಿರದ ೬೦೦ ಕ್ಕೂ ಹೆಚ್ಚು ಅಭ್ಯರ್ಥಿಗಳು ಈಗಾಗಲೇ ನೊಂದಾಯಿಸಿಕೊಂಡಿದ್ದಾರೆ.

ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ ಆಯೋಜಿಸಿರುವ ಹ್ಯಾಕಥಾನ್‌ಗೆ ನೊಂದಾಯಿಸಿಕೊಳ್ಳಲು ಇಂದು ಕೊನೆಯ ದಿನವಾಗಿದೆ. ಆಸಕ್ತ ವಿದ್ಯಾರ್ಥಿಗಳು, ಸಂಶೋಧಕರು, ವೃತ್ತಿಪರರು, ನವೋದ್ಯಮ ಮತ್ತು ನಾವಿನ್ಯಕಾರರು https://nha.gov.in/hackathon ಜಾಲತಾಣದಲ್ಲಿ ನೊಂದಾಯಿಸಿಕೊಳ್ಳಬಹುದಾಗಿದೆ.

ಡಿಜಿಟಲ್ ನಾವಿನ್ಯತಾ ಪರಿಹಾರಗಳನ್ನು ಈಗಿರುವ ವ್ಯವಸ್ಥೆಯೊಂದಿಗೆ ಸಮನ್ವಯಗೊಳಿಸಿ, ಕ್ಲೈಮ್ ಪ್ರಕ್ರಿಯೆ ತ್ವರಿತಗೊಳಿಸುವ ಹಾಗೂ ಬೃಹತ್ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುವ ಭವಿಷ್ಯ ಸನ್ನದ್ಧ ಚೌಕಟ್ಟು ರೂಪಿಸಲು ಈ ಹ್ಯಾಕಥಾನ್ ಆಯೋಜಿಸಲಾಗಿದೆ.

ಮುಂದಿನ ತಿಂಗಳ ೮ ಹಾಗೂ ೯ ರಂದು ಬೆಂಗಳೂರಿನಲ್ಲಿರುವ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಹ್ಯಾಕಥಾನ್ ಸಮಾರೋಪ ಸಮಾವೇಶ ನಡೆಯಲಿದೆ.

***************

ಉಡುಪಿ ಜಿಲ್ಲೆಯಲ್ಲಿನ ಬಾಳೆಬರೇ ರಾಜ್ಯ ಹೆದ್ದಾರಿ ೫೨ ರಲ್ಲಿರುವ ಬಾಳೆಬರೆ ಘಾಟಿಯಲ್ಲಿ ರಕ್ಷಣಾತ್ಮಕ ಕಾಮಗಾರಿ ನಡೆದಿರುವ ಕಾರಣ ಈ ಮಾರ್ಗದಲ್ಲಿ ಎಲ್ಲಾ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ.

*******ಮುಕ್ತಾಯ********